ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

ಸಿಸಿ ನಂ.386/2020

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿಃ ಅಬ್ದುಲ್ಲಾ ತಂದೆ ಮಹ್ಮದ ಸಾಬ ನಾಡೇಪಲ್ಲಿ,
ವಃ 30 ವರ್ಷ, ಉಃ ವ್ಯಾಪಾರ,
ಸಾಃ ಕಲಬುರಗಿ ರಸ್ತೆ, ಸೇಡಂ.

----

ದೋ ಷಾ ರೋ ಪ ಣೆ

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 23-04-2020 ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಸೇಡಂ ಠಾಣಾ ಹದ್ದಿಯಲ್ಲಿರುವ ದೊಡ್ಡ ಅಗಸಿ ಮಜೀದ ಹತ್ತಿರ ಚಾಸಾ.1 ನೇದ್ದವನು ತನ್ನ ಮನೆಯಿಂದ ನಡೆದುಕೊಂಡು ಹೋಗುತ್ತಿದ್ದಾಗ, ಆರೋಪಿತನಾದ ನೀನು ಚಾಸಾ.1 ನೇದ್ದವನ ಜೊತೆ ವಿನಾಕಾರಣ ಜಗಳ ತೆಗೆದು, ಮುಂದೆ ಹೋಗದಂತೆ ಅಕ್ರಮವಾಗಿ ತಡೆದು ನಿಲ್ಲಿಸಿದ್ದು, ಅಲ್ಲದೇ ಫಕೀರ ಮಾಕೆ ಒವಡೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.341, 504 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ.1 ನೇದ್ದವನ ಜೊತೆ ವಿನಾಕಾರಣ ಜಗಳ ತೆಗೆದು, ಕೈಯಿಂದ ಬೆನ್ನಿಗೆ ಗುದ್ದಿ ಗುಪ್ತಗಾಯಪಡಿಸಿದ್ದು, ಅಲ್ಲದೇ ಕಲ್ಲಿನಿಂದ ಎಡ ಕಣ್ಣಿನ ಹತ್ತಿರ ಹೊಡೆದು ರಕ್ತಗಾಯಪಡಿಸಿದ್ದು, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.323, 324 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತಳಾದ ನೀನು ಚಾಸಾ.1 ನೇದ್ದವರಿಗೆ ಜೊತೆ ವಿನಾಕಾರಣ ಜಗಳ ತೆಗೆದು, ಹೊಡಿಬಡಿ ಮಾಡಿದ್ದು ಅಲ್ಲದೇ ನಿನಗೆ ಬಹಳ ಸೊಕ್ಕು ಬಂದಿದೆ ಏನಾದರೂ ಆಗಲಿ ನಿನಗೆ ಬಿಡುವುದಿಲ್ಲ ಹೊಡೆದು ಖಲ್ಲಾಸ ಮಾಡುತ್ತೇನೆ ಅಂತಾ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತಳಾದ ನೀನು ಭಾ.ದಂ.ಸಂ.506 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕ 21-06-2023 ಪ್ರ.ದ.ನ್ಯಾದಂ. ಸೇಡಂ.